ವಿಜಯ ಕರ್ನಾಟಕ

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಏಕೀಕೃತ ಮಾರುಕಟ್ಟೆ ವೇದಿಕೆ' (ಇ ಮಾರುಕಟ್ಟೆ) ಇದೀಗ ದೇಶಾದ್ಯಂತ ಸದ್ದುಮಾಡುತ್ತಿದೆ. ರಾಜ್ಯದಲ್ಲಿ ಈ ಯೋಜನೆ ಯಶಸ್ವಿಯಾಗುತ್ತಿದ್ದಂತೆ ಕೇಂದ್ರ ಸರಕಾರ ಇದೇ ಮಾದರಿಯ ಈ ಮಾರುಕಟ್ಟೆ ವ್ಯವಸ್ಥೆಯನ್ನು ದೇಶಾದ್ಯಂತ ಜಾರಿಗೆ ತರಲು ಮುಂದಾಗಿದೆ. ರೈತರಿಗೆ ವರವಾಗಿರುವ ಈ ಯೋಜನೆ ಕುರಿತಾದ ಪೂರ್ತಿ ಮಾಹಿತಿ ಇಲ್ಲಿದೆ.

ಕರ್ನಾಟಕವೇ ಇ ಮಾರುಕಟ್ಟೆ ಲೀಡರ್

■ ಆರ್. ತುಳಸಿಕುಮಾರ್

ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ತಂದುಕೊಡುವ ಹಾಗೂ ಮಧ್ಯವರ್ತಿಗಳ ಹಾವಳಿ ಇಲ್ಲದೆ ಬೆಳೆ ಬಿಕರಿ ಮಾಡಲು ರಾಜ್ಯ ಸರಕಾರ ಹೊರತಂದ 'ಏಕೀಕೃತ ಮಾರುಕಟ್ಟೆ ವೇದಿಕೆ' ಆರ್ಥಾತ್ 'ಇ-ಮಾರುಕಟ್ಟೆ' ವ್ಯವಸ್ಥೆ ಈಗ ದೇಶದೆಲ್ಲೆಡೆ ಸದ್ದು ಮಾಡುತ್ತಿದೆ. ತಂತ್ರಜ್ಞಾನದ ಆವಿಷ್ಕಾರವನ್ನು ರೈತರಿಗೆ ಲಾಭವಾಗುವಂತೆ ಮಾರ್ಪಡಿಸಿ, ಆ ಮೂಲಕ ಕೃಷಿ ಉತ್ಪನ್ನಗಳಿಗೆ ಮೌಲ್ಯ ತಂದುಕೊಡುವ ಶ್ರೇಯಸ್ಸು ಇ-ಮಾರುಕಟ್ಟೆ ಯೋಜನೆಗೆ ಸಂದಿದೆ.

ಯೋಜನೆ ಪ್ರಾರಂಭವಾದ ಎರಡೇ ವರ್ಷದಲ್ಲಿ ದೇಶದ ಗಮನ ಸೆಳೆದಿರುವ ಇ-ಮಾರುಕಟ್ಟೆ ವ್ಯವಸ್ಥೆ ನಮಗೂ ಬೇಕೆಂದು ನಾನಾ ರಾಜ್ಯಗಳ ರೈತರು ಆಯಾ ಸರಕಾರಗಳ ಮುಂದೆ ಬೇಡಿಕೆ ಇಟ್ಟಿವೆ. ಕೃಷಿಕರು, ರೈತ ಮುಖಂಡರು ಹಾಗೂ ಜನಪ್ರತಿನಿಧಿಗಳು ಕೂಡ ಯೋಜನೆಗೆ ಉಘೇ ಎಂದಿದ್ದಾರೆ. ಅಧಿಕಾರಿಶಾಹಿ ಕೂಡ ಮೈ ಚಳಿ ಬಿಟ್ಟು ಅನ್ನದಾತರ ನೆರವಿಗೆ ಧಾವಿಸಿ, ಅವರು ಬೆಳೆದ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ತಂದುಕೊಡುವ ಯತ್ನ ಮಾಡಿದೆ. ಇದನ್ನು ಗಮನಿಸಿರುವ ಕೇಂದ್ರ ಸರಕಾರ 'ಕರ್ನಾಟಕ ಮಾದರಿ'ಯನ್ನು ಇಡೀ ದೇಶಕ್ಕೆ ವಿಸ್ತರಿಸುವ ಸರಕಲ್ಪ ಮಾಡಿದೆ.

ರಾಜ್ಯದ 157 ಕೃಷಿ ಉತ್ಪನ್ನಮಾರುಕಟ್ಟೆ(ಎಪಿಎಂಸಿ)ಗಳಲ್ಲಿ ರೈತರ ಉತ್ಪನ್ನಗಳಿಗೆ ಮೌಲ್ಯಯುತ ಬೆಲೆ ಸಿಗುತ್ತಿಲ್ಲ ಎಂಬ ಆಕ್ಷೇಪ ಇಂದು ನಿನ್ನೆಯದಲ್ಲ, ಮಧ್ಯವರ್ತಿಗಳ ಕಾಟದಿಂದ ರೈತರಿಗೆ ಅನ್ಯಾಯವಾಗುತ್ತಿದ್ದರೂ, ಎಪಿಎಂಸಿಗಳು ಕ್ಯಾರೇ ಎನ್ನುತ್ತಿರಲಿಲ್ಲ. ಇದಕ್ಕೆ ಅಂತ್ಯ ಹಾಡಲು ಸರಕಾರ ಇ-ಮಾರುಕಟ್ಟೆ ಯೋಜನೆಯನ್ನು ಘೋಷಿಸಿತು. 2014 ಫೆ.22ರಂದು ತಿಪಟೂರು, ತುಮಕೂರು ಹಾಗೂ ಚಾಮರಾಜನಗರದ ಎಪಿಎಂಸಿಗಳಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆಗೆ ಚಾಲನೆ ದೊರೆತಿದ್ದು ಈಗ 157 ಎಪಿಎಂಸಿಗಳ ಪೈಕಿ 151ರಲ್ಲಿ ಯೋಜನೆ ಜಾರಿಯಲ್ಲಿದೆ. ಮೊದಲ ವರ್ಷ ಮೂರು ಉತ್ಪನ್ನಕ್ಕೆ ಸೀಮಿತವಾಗಿದ್ದು ವಹಿವಾಟು ಈಗ 47 ಉತ್ಪನ್ನಗಳಿಗೆ ಅವಕಾಶ ಮಾಡಿಕೊಟ್ಟಿದೆ. ವಹಿವಾಟು ಮೌಲ್ಯ ಕೂಡ 27 ಕೋಟಿ ರೂ.ನಿಂದ 30 ಸಾವಿರ ಕೋಟಿ ರೂ.ಗೆ ಹಿಗ್ಗಿದೆ.

ಈ ಯಶೋಗಾಥೆಗೆ ರೈತರು ಸಾಥ್ ನೀಡಿದ್ದರಿಂದ ರಾಜ್ಯಾದ್ಯಂತ 18 ಲಕ್ಷ ಮಂದಿ ಇ-ಮಾರುಕಟ್ಟೆ ಮೂಲಕ ವಹಿವಾಟು ನಡೆಸಲು ನೋಂದಣಿ ಮಾಡಿಕೊಂಡಿದ್ದಾರೆ. ಈ ಸಂಖ್ಯೆಯನ್ನು 30 ಲಕ್ಷಕ್ಕೆ ಹೆಚ್ಚಿಸಲು ಆರ್‌ಇಎಂಎಸ್ ಗುರಿ ಹೊಂದಿದೆ. ಯೋಜನೆಯ ಕುರಿತು ರೈತರಿಗೆ ತರಬೇತಿ ನೀಡಲು ಹಳ್ಳಿ ಹಳ್ಳಿಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ. ಉತ್ಪನ್ನಗಳ ಸ್ವಚ್ಛತೆ, ವರ್ಗೀಕರಣ ಹಾಗೂ ಪ್ಯಾಕಿಂಗ್‌ಗೆ ಆಧುನಿಕ ಯಂತ್ರಗಳನ್ನು ಅಳವಡಿಸಲಾಗಿದೆ. ಇದೀಗ ಉತ್ಪನ್ನಗಳ ಗುಣ ವಿಶ್ಲೇಷಣೆಗೆ ಒತ್ತು ನೀಡಿದ್ದು ವರ್ಷಾಂತ್ಯದ ವೇಳೆಗೆ 30 ಎಪಿಎಂಸಿಗಳಲ್ಲಿ ಪರಿಚಯಿಸುವ ಕೆಲಸ ಸಾಗಿದೆ ಎನ್ನುತ್ತಾರೆ ಆರ್‌ಇಎಂಎಸ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಮನೋಜ್ ರಾಜನ್.

ಇ-ಮಾರುಕಟ್ಟೆಯ ಮೈಲಿಗಲ್ಲುಗಳು

ಯೋಜನೆ ವಿವರ	2013-14	14-15	15-16	16-17*
ಆನ್‌ಲೈನ್ ಮಾರುಕಟ್ಟೆ	03	52	103	151
ಇ-ಪರ್ಮಿಟ್ ಕೇಂದ್ರ	03	52	157	157
ಉತ್ಪನ್ನಗಳ ಸಂಖ್ಯೆ	03	09	37	47
ವಹಿವಾಟು (ಕೋಟಿ ರೂ.)	27	5,645	13,276	30,000
ವಹಿವಾಟಿನ ಲಾಟ್‌ಗಳು	1,913	17 ಲಕ್ಷ	24 ಲಕ್ಷ	51 ಲಕ್ಷ

(★ ಈ ವರ್ಷದ ಆಕ್ಟೋಬರ್ ಅಂತ್ಯದವರೆಗೆ)

ಉಪಯೋಗಗಳು

- ಮಧ್ಯವರ್ತಿಗಳ ಹಾವಳಿಗೆ ಕಡಿವಾಣ
- ರೈತರಿಗೆ ಸ್ಪರ್ಧಾತ್ಮಕ ಬೆಲೆಯ ಲಾಭ
- ಕೃಷಿಕರ ಇಷ್ಟದಂತೆ ಬೆಲೆ ನಿಗದಿ
- ಸಮಯ ಉಳಿತಾಯ, ಉತ್ಪನ್ನಗಳ ಶ್ರದ್ಧಿತ ವಿಲೇವಾರಿ
- ಮನೆಯಲ್ಲೇ ಕುಳಿತು ಬೆಳೆಯ ಬೆಲೆ ನಿಗದಿ ಮಾಡಬಹುದು
- ಉತ್ಪನ್ನ ಬಿಕರಿಯಾದ ಬೆನ್ನಲ್ಲೇ ಹಣ ಪಾವತಿ

ಎಲ್ಲೆಲ್ಲಿ ಇ-ಮಾರುಕಟ್ಟೆ?

■ **ಬೆಂಗಳೂರು ವಿಭಾಗ**
ಬೆಂಗಳೂರು ನಗರ(2), ಬೆಂಗಳೂರು ಗ್ರಾ.(2), ರಾಮನಗರ(3), ಚಿಕ್ಕಬಳ್ಳಾಪುರ(3), ಕೋಲಾರ(5), ಚಿತ್ರದುರ್ಗ(5), ದಾವಣಗೆರೆ(6), ಶಿವಮೊಗ್ಗ(7), ತುಮಕೂರು(9).

■ **ಮೈಸೂರು ವಿಭಾಗ**
ಚಾಮರಾಜನಗರ(3), ಚಿಕ್ಕಮಗಳೂರು(5), ದಕ್ಷಿಣ ಕನ್ನಡ(5), ಹಾಸನ(6), ಮಂಡ್ಯ(6), ಮೈಸೂರು(7), ಉಡುಪಿ(3).

■ **ಬೆಳಗಾವಿ ವಿಭಾಗ**
ಬಾಗಲಕೋಟೆ(5), ಬೆಳಗಾವಿ(10), ವಿಜಯಪುರ(4), ಧಾರವಾಡ(5), ಗದಗ(5), ಹಾವೇರಿ(6), ಉತ್ತರಕನ್ನಡ(8).

■ **ಕಲಬುರಗಿ ವಿಭಾಗ**
ಬಳ್ಳಾರಿ(6), ಬೀದರ್(4), ಕಲಬುರಗಿ(4), ಕೊಪ್ಪಳ(5), ರಾಯಚೂರು(4), ಯಾದಗಿರಿ(2).

(ಆವರಣದಲ್ಲಿರುವುದು ಬೆಲ್ಲಾ ಎಪಿಎಂಸಿಗಳ ಸಂಖ್ಯೆ)

ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ.